

## ಭಾರಿ ನಷ್ಟದಿಂದ ಸಂಕಷ್ಟಕ್ಕೆ ಸಿಲುಕಿದ ರೈತರು | ಇಳುವರಿಯೂ ಕುಂಠಿತ

# ಪಾತಾಳಕ್ಕೆ ಕುಸಿದ ಶುಂಠಿ ಬೆಲೆ

ಅವಿನಾಶ್ ಜೈನಹಳ್ಳಿ ಮೈಸೂರು

ಕಳೆದ ವರ್ಷ ಬಂಗಾರದ ಬೆಲೆ ಕಂಡಿದ್ದ ಹಸಿ ಶುಂಠಿ ದರ ದಿಢೀರ್ ಕುಸಿದಿದೆ. 2023ರಲ್ಲಿ 60 ಕೆ.ಜಿ. ಬ್ಯಾಗ್‌ನ ಹಳೇ ಶುಂಠಿ 8 ರಿಂದ 14 ಸಾವಿರ ರೂ. ವರೆಗೆ ಮಾರಾಟವಾಗಿದ್ದರೆ, ಹೊಸ ಶುಂಠಿ 6 ರಿಂದ 8 ಸಾವಿರ ರೂ. ವರೆಗೆ ಮಾರಾಟವಾಗಿತ್ತು. ಪ್ರಸಕ್ತ ಸಾಲಿನಲ್ಲಿ ಬೆಲೆ ಪಾತಾಳಕ್ಕೆ ಇಳಿದಿರುವುದರಿಂದ ರೈತರು ಸಂಕಷ್ಟ ಸಿಲುಕಿದ್ದಾರೆ.

ಐದು ತಿಂಗಳ ಹಿಂದೆಯಷ್ಟೇ 5 ರಿಂದ 6 ಸಾವಿರ ರೂ.ಗೆ ಮಾರಾಟವಾಗಿದ್ದ ಶುಂಠಿ ಈಗ 950 ರಿಂದ 1500 ರೂ.ರವರೆಗೆ ಮಾರಾಟವಾಗುತ್ತಿದೆ. ಜುಲೈನಲ್ಲಿ ಕೆಜಿಗೆ 400 ರೂ. ಇದ್ದ ಬೆಲೆ ಈಗ 25 ರಿಂದ 30 ರೂ.ಗೆ ಇಳಿಕೆಯಾಗಿದೆ.

ಸಾಮಾನ್ಯವಾಗಿ ಹಳೇ ಮೈಸೂರು ಮತ್ತು ಮಲೆನಾಡು ಭಾಗದಲ್ಲಿ 2022-23ರ ಅವಧಿಯಲ್ಲಿ ಅಂದಾಜು 15 ಸಾವಿರ ಹೆಕ್ಟೇರ್‌ನಲ್ಲಿ ಶುಂಠಿ ಬೆಳೆಯಲಾಗಿತ್ತು. ಎರಡು ವರ್ಷ ದಾಖಲೆ ಪ್ರಮಾಣದ ಬೆಲೆ ಸಿಕ್ಕ ಹಿನ್ನೆಲೆಯಲ್ಲಿ ಪ್ರಸಕ್ತ ವರ್ಷ ಬಿತ್ತನೆ ಪ್ರಮಾಣ ಮೂರು ಪಟ್ಟು ಹೆಚ್ಚಾಗಿದೆ. ಇದರಿಂದ ನಿರೀಕ್ಷೆಗೂ ಮೀರಿದ ಶುಂಠಿ ಉತ್ಪಾದನೆಯಾಗಿದ್ದು, ಸಹಜವಾಗಿಯೇ ಬೆಲೆ ಇಳಿಕೆಯಾಗಿದೆ. ಇತ್ತ ಅತಿಯಾದ ಮಳೆಯಿಂದ ಇಳುವರಿಯೂ ಕುಂಠಿತವಾಗಿದೆ. ಪರಿಣಾಮ ಶುಂಠಿ ನಂಬಿ ಲಕ್ಷಾಂತರ ರೂ. ಹೂಡಿಕೆ ಮಾಡಿದ್ದ ರೈತರು ನಷ್ಟ ಅನುಭವಿಸುವಂತಾಗಿದೆ.



> ಲಕ್ಷಾಂತರ ರೂ. ಖರ್ಚು ಮಾಡಿ ಮೂರು ಎಕರೆಯಲ್ಲಿ ಶುಂಠಿ ಬೆಳೆದಿದ್ದೇನೆ. ಜುಲೈನಲ್ಲಿ ಕೆಜಿಗೆ 400 ರೂ. ಇದ್ದ ಬೆಲೆ ಈಗ 25 ರಿಂದ 30 ರೂ.ಗೆ ಇಳಿಕೆಯಾಗಿದೆ. ಬೆಳೆಗಾರರು ಹೂಡಿಕೆ ಮಾಡಿದ್ದ ಬಂಡವಾಳವೂ ವಾಪಸ್ ಬರದಂತಹ ಸ್ಥಿತಿ ನಿರ್ಮಾಣವಾಗಿದೆ. ಇದರಿಂದ ಸಾಲ ತೀರಿಸುವುದು ಹೇಗೆ ಎಂಬ ಚಿಂತೆ ಕಾಡುತ್ತಿದೆ.
>
> | ರಾಜಶೇಖರ್
> ಶುಂಠಿ ಬೆಳೆಗಾರ, ಕೊಡಗು

## ಎಕರೆಗೆ 4 ಲಕ್ಷ ರೂ. ವೆಚ್ಚ

ಪ್ರತಿ ಎಕರೆಯಲ್ಲಿ ಶುಂಠಿ ಬಿತ್ತನೆ ಮಾಡಿ,ಕಟಾವು ಮಾಡುವ ವರೆಗೆ 3 ರಿಂದ 4 ಲಕ್ಷ ರೂ. ವೆಚ್ಚವಾಗುತ್ತದೆ. ಬಿತ್ತನೆ ಸಂದರ್ಭ 60 ಕೆಜಿ ಬ್ಯಾಗ್ ಬಿತ್ತನೆ ಬೀಜಕ್ಕೆ 6 ರಿಂದ 7 ಸಾವಿರ ರೂ. ನೀಡಿ ಕೃಷಿ ಮಾಡಿದ್ದವರಿಗೆ ಹೂಡಿಕೆ ಮಾಡಿದ್ದ ಬಂಡವಾಳ ವಾಪಸ್ ಬರದಂತಹ ಸ್ಥಿತಿ ನಿರ್ಮಾಣವಾಗಿದೆ.

ಕೃಷಿ ವಾಣಿಜ್ಯ

# ಬಯೋ–ಬಿಟುಮೆನ್ ಸಂಚಾರ ಕ್ರಾಂತಿಗೆ ಮುನ್ನುಡಿ



ಒಂದು ಅಂದಾಜಿನ ಪ್ರಕಾರ ಭಾರತವು ಪ್ರತಿವರ್ಷ ಸುಮಾರು 350 ಮಿಲಿಯನ್ ಟನ್ ಕೃಷಿ ತ್ಯಾಜ್ಯವನ್ನು ಉತ್ಪಾದಿಸುತ್ತದೆ. ಇದನ್ನು ಈಗ ಕಸವಾಗಿ ನೋಡುವ ಕಾಲ ಸರಿದಿದೆ. ನವೀಕರಿಸಬಹುದಾದ ಇಂಧನ ಸಚಿವಾಲಯ ನೀಡಿದ ಅಂದಾಜಿನ ಪ್ರಕಾರ, ಈ ತ್ಯಾಜ್ಯವು ಪ್ರತಿವರ್ಷ 18,000 ಮೆಗಾವ್ಯಾಟ್‌ಗಿಂತ ಹೆಚ್ಚು ವಿದ್ಯುತ್ ಉತ್ಪಾದಿಸುತ್ತದೆ.

ಇಂಡಿಯನ್ ಕೌನ್ಸಿಲ್ ಆಫ್ ಅಗ್ರಿಕಲ್ಚರಲ್ ರಿಸರ್ಚ್ (ಐಸಿಎಆರ್) ಕೃಷಿಯ ವಿವಿಧ ಸ್ತರಗಳಲ್ಲಿ ಉತ್ಪತ್ತಿಯಾಗುವ ತ್ಯಾಜ್ಯದ ನಿರ್ವಹಣೆಯ ಮಹತ್ವವನ್ನು ಅರಿತುಕೊಂಡಿತು. ಕೃಷಿ ತ್ಯಾಜ್ಯವನ್ನು ಕೆಲವು ಉಪಯುಕ್ತ ಉತ್ಪನ್ನಗಳಾಗಿ ಪರಿವರ್ತಿಸುವುದರ ಜೊತೆಗೆ ಅದರ ನಿರ್ವಹಣೆಯ ಮೇಲೆ ಕೇಂದ್ರೀಕರಿಸಿದ ಸಂಶೋಧನೆಯನ್ನು ಪ್ರಾರಂಭಿಸಿತು. ಆ ಮೂಲಕ ತ್ಯಾಜ್ಯದಿಂದ ಸಂಪತ್ತನ್ನು ಉತ್ಪಾದಿಸುವ ಉದ್ದೇಶಿತ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸುವ ಪ್ರಯತ್ನಗಳನ್ನು ಐಸಿಎಆರ್ ಸಂಸ್ಥೆಗಳು ತೀವ್ರಗೊಳಿಸಿವೆ.

ಭತ್ತದ ಹೊಟ್ಟು, ಕಬ್ಬಿನ ಸಿಪ್ಪೆ ಮತ್ತು ಗೋಧಿ ಹುಲ್ಲಿನಂತಹ ಕೃಷಿ ತ್ಯಾಜ್ಯಗಳಿಂದ ಜೈವಿಕ ಬಿಟುಮೆನ್ ತಯಾರಿಸಬಹುದು. ಕೌನ್ಸಿಲ್ ಆಫ್ ಸೈಂಟಿಫಿಕ್ ಅಂಡ್ ಇಂಡಸ್ಟ್ರಿಯಲ್ ರಿಸರ್ಚ್ ಮತ್ತು ಸೆಂಟ್ರಲ್ ರೋಡ್ ರಿಸರ್ಚ್ ಇನ್ಸ್ಟಿಟ್ಯೂಟ್ ಭತ್ತದ ಹೊಟ್ಟಿನಿಂದ ಬಿಟುಮೆನ್ ತಯಾರಿಸುವ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಿವೆ.

**ಬಯೋ ಬಿಟುಮೆನ್ ಭವಿಷ್ಯವೇ?**

ಮೂಲಸೌಕರ್ಯಗಳ ಅಭಿವೃದ್ಧಿ ಮತ್ತು ನಿರ್ಮಾಣ ಕೆಲಸಗಳಲ್ಲಿ ಅಗಾಧವಾಗಿ, ಸಿಮೆಂಟ್ ನಂತರ ಬಳಕೆಯಾಗುವ ವಸ್ತು ಬಿಟುಮೆನ್. ಬಿಟುಮೆನ್ ಕಚ್ಚಾ ತೈಲದ ಉಪ ಉತ್ಪನ್ನವಾಗಿದ್ದು, ಇದನ್ನು ರಸ್ತೆಗಳು, ಛಾವಣಿ ಮತ್ತು ಜಲನಿರೋಧಕ ಸೇರಿದಂತೆ ವಿವಿಧ ಉದ್ದೇಶಗಳಿಗಾಗಿ ಬಳಸಲಾಗುತ್ತದೆ. ಇದು ಭಾರೀ ವಾಹನಗಳ ಮತ್ತು ತೀವ್ರ ಹವಾಮಾನ ಪರಿಸ್ಥಿತಿಗಳನ್ನು ತಡೆದುಕೊಳ್ಳಬಲ್ಲ ದೀರ್ಘಕಾಲೀನ ರಸ್ತೆಗಳನ್ನು ನಿರ್ಮಿಸಲು ಸೂಕ್ತವಾಗಿದೆ. ಭಾರತದ ಬಿಟುಮೆನ್ ಮಾರುಕಟ್ಟೆ 2023 ರಿಂದ 2032 ರವರೆಗೆ ಶೇ.4ರಷ್ಟು ಒಟ್ಟೂ ವಾರ್ಷಿಕ ಬೆಳವಣಿಗೆಯ ದರದಲ್ಲಿ (ಸಿ.ಎ.ಜಿ.ಆರ್.) ಬೆಳೆಯುವ ನಿರೀಕ್ಷೆಯಿದೆ. 2032ರ ವೇಳೆಗೆ 6.8 ಬಿಲಿಯನ್ ಡಾಲರ್ ತಲುಪುವ ಮುನ್ಸೂಚನೆ ಇದೆ.

**ಅಡ್ಡಪರಿಣಾಮ**

ಇನ್ನೊಂದೆಡೆ ಹೆಚ್ಚಿನ ಪಿ.ಎಎಚ್ (ಪಾಲಿಸೈಕ್ಲಿಕ್ ಆರೊಮ್ಯಾಟಿಕ್ ಹೈಡ್ರೋಕಾರ್ಬನ್ಗಳು) ಅಂಶ ಮತ್ತು ಹೈಡ್ರೋಜನ್ ಸಲ್ಫೈಡ್ ಇರುವುದರಿಂದ ಸಾಂಪ್ರದಾಯಿಕ ಬಿಟುಮೆನ್ ಅನ್ನು ಅಪಾಯಕಾರಿ ವಸ್ತುವೆಂದು ಪರಿಗಣಿಸಲಾಗುತ್ತದೆ. ಮನುಷ್ಯ ಮತ್ತು ಪರಿಸರದ ಮೇಲೆ ಅಡ್ಡ ಪರಿಣಾಮ ಬೀರುತ್ತವೆ. ನವೀಕರಿಸಲಾಗದ ಸಂಪನ್ಮೂಲವಾಗಿದ್ದು, ಬಹಳ ವೇಗವಾಗಿ ಕ್ಷೀಣಿಸುತ್ತಿದೆ. ಸಾಂಪ್ರದಾಯಿಕ ಬಿಟುಮೆನ್‌ನಿಂದ ಉಂಟಾಗುವ ದುಷ್ಪರಿಣಾಮಗಳನ್ನು ತಗ್ಗಿಸುವ ನಿಟ್ಟಿನಲ್ಲಿ ಕಂಡುಹಿಡಿಯಲಾದ ಪರ್ಯಾಯ ವಸ್ತುವೇ ಬಯೋ ಬಿಟುಮೆನ್ ಅರ್ಥಾತ್ ಜೈವಿಕ ಬಿಟುಮೆನ್.

ವಿಶ್ವನಾಥ ಭಟ್, ಧಾರವಾಡ

ಭಾರತವು ವಿಶ್ವದ ಅತಿದೊಡ್ಡ ರಸ್ತೆ ಜಾಲವನ್ನು ಹೊಂದಿದೆ. 90% ರಸ್ತೆಗಳು ಬಿಟುಮೆನ್ ಮೇಲ್ಪದರವನ್ನು ಹೊಂದಿವೆ. ಪೆಟ್ರೋಲಿಯಂ ಆಧಾರಿತ ಬಿಟುಮೆನ್ನಲ್ಲಿ ಶೇಕಡಾ 35ರಷ್ಟು ಲಿಗ್ನಿನ್ ಮಿಶ್ರಣ ಮಾಡಲು ಸರ್ಕಾರ ಅನುಮತಿ ನೀಡುತ್ತದೆ ಎಂದು ಕೇಂದ್ರ ರಸ್ತೆ ಸಾರಿಗೆ ಸಚಿವ ನಿತಿನ್ ಗಡ್ಕರಿ ಸಂಸತ್ತಿನ ಅಧಿವೇಶನದಲ್ಲಿ ಹೇಳಿದ್ದಾರೆ. 2023–24ರಲ್ಲಿ ಭಾರತವು 88 ಲಕ್ಷ ಟನ್ ಬಿಟುಮೆನ್ ಬಳಸಿದೆ. ಈ ವರ್ಷ ಅದು 100 ಲಕ್ಷ ಟನ್ ತಲುಪುವ ನಿರೀಕ್ಷೆಯಿದೆ ಎಂದು ಸಚಿವರು ಸದನದಲ್ಲಿ ಹೇಳಿದ್ದಾರೆ.

**ಸಂಶೋಧನೆ**

ಪ್ರಯೋಗಾಲಯದಲ್ಲಿ ಬಯೋ–ಬಿಟುಮೆನ್ ಪರೀಕ್ಷಿಸಿ, ಇದರಿಂದ ನಿರ್ಮಿಸಲಾದ ರಸ್ತೆಯ ದೀರ್ಘಕಾಲೀನ ಕಾರ್ಯಕ್ಷಮತೆಯನ್ನು ನಿರ್ಣಯಿಸಲು ಸಚಿವಾಲಯವು ದೇಶದ ಅತ್ಯುನ್ನತ ಸಂಶೋಧನಾ ಸಂಸ್ಥೆಗಳಾದ ಐಐಟಿ ರೂರ್ಕಿ ಮತ್ತು ನವದೆಹಲಿಯ ಸೆಂಟ್ರಲ್ ರೋಡ್ ರಿಸರ್ಚ್ ಇನ್ಸ್ಟಿಟ್ಯೂಟ್ ಡೆಹ್ರಾಡೂನ್ ಸಹಯೋಗದೊಂದಿಗೆ ಎರಡು ಸಂಶೋಧನಾ ಯೋಜನೆಗಳನ್ನು ಮಂಜೂರು ಮಾಡಿದೆ.

ರಸ್ತೆ ನಿರ್ಮಾಣದಲ್ಲಿ ಬಯೋ–ಬಿಟುಮೆನ್ ಸೂಕ್ತತೆಯನ್ನು ನಿರ್ಣಯಿಸಲು ಮೂರು ವರ್ಷಗಳ ಅವಧಿಗೆ ಕಾರ್ಯಕ್ಷಮತೆಯ ಮೇಲ್ವಿಚಾರಣೆಗಾಗಿ ರಾಷ್ಟ್ರೀಯ ಹೆದ್ದಾರಿ–709, ಶಾಮ್ಲಿ–ಮುಜಾಫರ್ನಗರ ವಿಭಾಗದಲ್ಲಿ 2022ರ ನವೆಂಬರ್ನಲ್ಲಿ ಪರೀಕ್ಷಾ ವಿಭಾಗವನ್ನು ಸಂಯೋಜಿಸಲಾಗಿತ್ತು. ಹಾಗೆಯೇ ರಾಷ್ಟ್ರೀಯ ಹೆದ್ದಾರಿ–40ರ ಜೋರಾಬತ್–ಶಿಲ್ಲಾಂಗ್ ವಿಭಾಗದಲ್ಲಿ ಬಯೋ–ಬಿಟುಮೆನ್ನೊಂದಿಗೆ ಪ್ರಯೋಗ ನಡೆಸಲು ಎನ್ಎಚ್‌ಡಿಎಐ ಯೋಚಿಸಿದೆ.

**ಭತ್ತದ ಹೊಟ್ಟು, ಕಬ್ಬಿನ ಸಿಪ್ಪೆ ಮತ್ತು ಗೋಧಿ ಹುಲ್ಲಿನಂತಹ ಕೃಷಿ ತ್ಯಾಜ್ಯಗಳಿಂದ ಜೈವಿಕ ಬಿಟುಮೆನ್ ತಯಾರಿಸಬಹುದು. ಕೌನ್ಸಿಲ್ ಆಫ್ ಸೈಂಟಿಫಿಕ್ ಅಂಡ್ ಇಂಡಸ್ಟ್ರಿಯಲ್ ರಿಸರ್ಚ್ ಮತ್ತು ಸೆಂಟ್ರಲ್ ರೋಡ್ ರಿಸರ್ಚ್ ಇನ್ಸ್ಟಿಟ್ಯೂಟ್ ಭತ್ತದ ಹೊಟ್ಟಿನಿಂದ ಬಿಟುಮೆನ್ ತಯಾರಿಸುವ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಿವೆ.**

ಬಯೋ–ಬಿಟುಮೆನ್‌ನ ನಿರೀಕ್ಷಿತ ಪ್ರಯೋಜನಗಳೆಂದರೆ ಸಾಂಪ್ರದಾಯಿಕ ಬಿಟುಮೆನ್ ಆಮದು ಕಡಿಮೆಯಾಗಿ, ಹಸಿರು ಮನೆ ಅನಿಲಗಳ ಹೊರಸೂಸುವಿಕೆಯನ್ನು ಕಡಿಮೆ ಮಾಡುವುದು ಮತ್ತು ಕೃಷಿ ಉತ್ಪನ್ನಗಳ ಪೂರಿತ ಜೈವಿಕ ಬಿಟುಮಿನ್ ಮೂಲಕ ರೈತರು/ಎಂ.ಎಸ್.ಎಂ.ಇಗಳಿಗೆ ಆದಾಯವನ್ನು ಉತ್ಪಾದಿಸಲು ಮತ್ತು ಉದ್ಯೋಗವನ್ನು ಒದಗಿಸಲು ಅವಕಾಶ, ರಸ್ತೆ ನಿರ್ಮಾಣದಲ್ಲಿ ಜೈವಿಕಬಿಟುಮೆನ್ ಬಳಕೆಯು ಆರೋಗ್ಯಕರ ಪರಿಸರ ವ್ಯವಸ್ಥೆಯನ್ನು ಹೊಂದುವಲ್ಲಿ ಮುಖ್ಯವಾಗುತ್ತದೆ. ಈ ಕ್ಷೇತ್ರದಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿ ಮುಂದುವರೆದಂತೆ, ಜೈವಿಕ ಬಿಟುಮೆನ್ 'ಹಸಿರು ಮೂಲಸೌಕರ್ಯ'ದ ಭವಿಷ್ಯದಲ್ಲಿ ಮಹತ್ವದ ಪಾತ್ರ ವಹಿಸುವ ಸಾಮರ್ಥ್ಯವನ್ನು ಹೊಂದಿದೆ.

# ಓಡುವ ನೀರು ಹಿಡಿದಿಟ್ಟ ಲಿಂಗರಡ್ಡಿ

**ಈಗ ರಾಜ್ಯದಲ್ಲಿ ಹಲವು ಪ್ರಗತಿ ಪರ ರೈತರು ಮಳೆ ನೀರು ಕೊಯ್ಲು ಪ್ರಯೋಗ ಕೈಗೊಂಡು ಯಶಸ್ವಿಯಾಗಿದ್ದಾರೆ. ತನ್ಮೂಲಕ ಕೃಷಿ ಚಟುವಟಿಕೆ ಸರಾಗವಾಗಿ ಸಾಗುವಂತೆ ಮಾಡಿದ್ದಾರೆ. ಬಾಗಲಕೋಟೆ ಜಿಲ್ಲೆಯ ಬೀಳಗಿ ತಾಲೂಕಿನ ಪ್ರಗತಿ ಪರ ರೈತ ಲಿಂಗರಡ್ಡಿ ಕುರ್ತಕೋಟಿ ಅವರು ಕೊಳವೆ ಬಾವಿ ವಿಫಲವಾದಾಗ ಧೃತಿಗೆಡದೇ ಮಳೆ ನೀರು ಕೊಯ್ಲು ಮಾಡಿ ಬೆಳೆಗಳಿಗೆ ನೀರಿನ ಕೊರತೆಯಾಗದಂತೆ ನೋಡಿಕೊಂಡಿದ್ದಾರೆ.**



■ ಡಿ.ಎಂ.ಸಾಹುಕಾರ, ಬೀಳಗಿ

ಮಳೆನೀರು ಕೊಯ್ಲು. ಇದು ಈಗ ಜಲಸಂರಕ್ಷಣೆಗೆ ಎಲ್ಲೆಡೆ ಸರ್ವೇಸಾಮಾನ್ಯವಾಗಿ ಕೇಳಿಬರುತ್ತಿರುವ ಮೂಲಮಂತ್ರ. ಇದನ್ನು ಬಾಗಲಕೋಟೆ ಜಿಲ್ಲೆಯ ಬೀಳಗಿ ತಾಲೂಕಿನ ಪ್ರಗತಿ ಪರ ರೈತ ಲಿಂಗರಡ್ಡಿ ಕುರ್ತಕೋಟಿ ಚೆನ್ನಾಗಿ ಅರಿತಿದ್ದಾರಲ್ಲದೇ, ಯಶಸ್ವಿಯಾಗಿ ಅನುಷ್ಠಾನಗೊಳಿಸಿದ್ದಾರೆ.

ಲಿಂಗರಡ್ಡಿ ಅವರು ಬಾದಾಮಿ ತಾಲೂಕಿನ ಹೊಸೂರ ಗ್ರಾಮದಲ್ಲಿ 13 ಎಕರೆ ಒಣಬೇಸಾಯ ಭೂಮಿಗೆ 2006ರಲ್ಲಿ ಸೂರ್ಯಕಾಂತಿ ಹಾಕಿದ್ದಾರೆ. ಮಳೆಯ ಮೇಲೆಯೇ 60 ಸಾವಿರ ರೂ. ಸೂರ್ಯಕಾಂತಿಯಿಂದ ಆದಾಯ ಬರುತ್ತದೆ. ಆ ಹಣದಿಂದಲೇ ನೀರಾವರಿ ಸೌಲಭ್ಯ ಕಲ್ಪಿಸಲು ಎರಡು ಕೊಳವೆಬಾವಿ ಕೊರೆಸಿದಾಗ ಸಣ್ಣ ಪ್ರಮಾಣದ ನೀರು ಲಭ್ಯವಾಯಿತು. ಆ ಅಲ್ಪಪ್ರಮಾಣದ ನೀರು ಉಪಯೋಗಿಸಿಕೊಂಡು ಹನಿ ನೀರಾವರಿ ಮೂಲಕ ಬಾಳೆ ಸಸಿಗಳನ್ನು ನಾಟಿ ಮಾಡಿದರು. ಫಲವತ್ತಾದ ಭೂಮಿಯಾದ್ದರಿಂದ ಬಾಳೆ ಬೆಳೆ ಭರಪೂರ ಬಂದು 8 ಲಕ್ಷ ರೂ. ಆದಾಯ ಬಂದಿತು.

ಆದರೆ ಎರಡ್ಮೂರು ವರ್ಷದಲ್ಲಿ ಕೊಳವೆ ಬಾವಿಗಳು ನೀರು ಪೂರೈಸುವದನ್ನು ನಿಲ್ಲಿಸಿಬಿಟ್ಟವು. ಅಂದರೆ ಬತ್ತಿ ಬರಿದಾದವು. ಜಮೀನಿನಲ್ಲಿರುವ ಬೆಳೆಗಳನ್ನು ಹೇಗಾದರೂ ಮಾಡಿ ಸಂರಕ್ಷಣೆಗೆ ಮಾಡಿಕೊಳ್ಳಬೇಕೆಂಬ ಹಠದಿಂದ ಎರಡು ಟ್ರ್ಯಾಕ್ಟರ್ ಖರೀದಿಸಿ ಟ್ಯಾಂಕರ್ ಮೂಲಕ ಸಸಿಗಳಿಗೆ ನೀರು ಪೂರೈಸಲಾರಂಭಿಸಿದರು. ಪ್ರತಿದಿನ ಬೆಳೆಗೆ ನೀರು ಪೂರೈಸುವುದು ಕಷ್ಟದ ಕೆಲಸವಾಯಿತು.ಮುಂದೇನು ಮಾಡಬೇಕೆಂಬ ಚಿಂತನೆ ಆರಂಭಿಸಿದ ಲಿಂಗರಡ್ಡಿ ಕುರ್ತಕೋಟಿ ಅವರು, ಇನ್ನೋರ್ವ ರೈತರೊಂದಿಗೆ ಸೇರಿ ಮಲಪ್ರಭಾ ನದಿಯಿಂದ ಪೈಪ್‌ಲೈನ್ ಜೋಡಿಸಿ ನೀರು ತರಬೇಕೆಂದು ಅಗತ್ಯ ಕೊಳವೆಗಳನ್ನು ಖರೀದಿಸಿದರು. ಆದರೆ ಏಕೋ ಏನೋ ಬೇಡವೆಂದು ತೀರ್ಮಾನಿಸಿದರು. ಖರೀದಿಸಿದ ಕೊಳವೆಗಳನ್ನು ಮರಳಿ ಮಾರಾಟ ಮಾಡಿದರು.

### ಸಮಯೋಚಿತ ಸಲಹೆ

ತಮ್ಮ 13 ಎಕರೆ ಜಮೀನದ ಸಮೀಪವಿರುವ ಮತ್ತೊಂದು ಕಡೆಗೆ ಕೊಳವೆ ಬಾವಿ ಕೊರೆಸಲು ಒಂದುವರೆ ಎಕರೆ ಭೂಮಿ ಖರೀದಿಸಿದರು. ಅದರಲ್ಲಿ ಕೊಳವೆ ಬಾವಿಗಳನ್ನು ಕೊರೆಸಿದರು. ಆದರೆ ಅಲ್ಲಿಯೂ ನೀರು ದೊರೆಯದೇ ಪ್ರಯತ್ನ ವಿಫಲವಾಯಿತು.

ಮುಂದೇನು ಮಾಡಬೇಕೆಂಬ ಯೋಚನೆಯಲ್ಲಿರುವಾಗ ಬೀಳಗಿಯ ಪ್ರಗತಿಪರ ರೈತ ರವಿ ಪಾಟೀಲ ಅವರೊಂದಿಗೆ ಮಾತನಾಡುತ್ತಾ ಕುಳಿತಾಗ ಅವರು, ರೇನ್ ವಾಟರ್ ಹಾರ್ವೆಸ್ಟಿಂಗ್ ಮಾಡಲು ಸಲಹೆ ನೀಡಿದರು. ಅವರ ಸಲಹೆ ಬೆನ್ನು ಹತ್ತಿದ ಎಲ್.ಬಿ. ಕುರ್ತಕೋಟಿ ಅವರು ಜಮೀನಿನ ಉತ್ತರ ಮತ್ತು ಪಶ್ಚಿಮ ದಿಕ್ಕಿಗೆ ಇರುವ ಹಳ್ಳಕ್ಕೆ 3 ಚೆಕ್‌ಡ್ಯಾಂ ನಿರ್ಮಿಸಿದರು. ಇದರಿಂದ ಓಡುವ ನೀರು ನಡೆಯುವಂತೆ, ನಡೆಯುವ ನೀರು ನಿಲ್ಲುವಂತೆ, ನಿಂತ ನೀರನ್ನು ಇಂಗುವಂತೆ ಮಾಡಿದರು.

### ನೀರಿಂಗಿಸಿದ ವಿಧಾನ

ಮೊದಲು ಗುಡ್ಡದಿಂದ ಹರಿದು ಬಂದ ಮಳೆ ನೀರು ಹಳ್ಳದ ಮೂಲಕ ಪೋಲಾಗಿ ಹೋಗುತ್ತಿತ್ತು. ಆ ಪೋಲಾಗುವ ನೀರು ಈಗ ಚೆಕ್‌ಡ್ಯಾಮನಲ್ಲಿ ಸಂಗ್ರಹಗೊಳ್ಳುತ್ತದೆ. ಹೆಚ್ಚಾದ ನೀರು ಸಂಗ್ರಹಿಸಲು ಜಮೀನಲ್ಲಿ ದೊಡ್ಡ ಕೆರೆಯೊಂದನ್ನು ನಿರ್ಮಿಸಿದ್ದು, ಅಲ್ಲಿ ಸಂಗ್ರಹಗೊಳ್ಳುವ ನೀರು ರೀಚಾರ್ಜ ಪಿಟ್(ಜಲ ಮರುಪೂರಣ) ಮೂಲಕ ಕೊಳವೆ ಬಾವಿಯಲ್ಲಿ ಇಂಗುವಂತೆ ಮಾಡಿರುವರು. ಇದರಿಂದ ಅಲ್ಲಿನ ಪ್ರದೇಶದ ಸುತ್ತಮುತ್ತಲು ಅಂತರ್ಜಲ ಪುನಶ್ಚೇತನವಾಗಿ ಬತ್ತಿ ಬರಿದಾಗಿದ್ದ ಕೊಳವೆ ಬಾವಿಗಳು ಸಮರ್ಪಕ ನೀರು ಪೂರೈಸಲು ಆರಂಭಿಸುವ ಮೂಲಕ ಆ ಪ್ರದೇಶದ ಹತ್ತಾರು ರೈತರ ಜಮೀನುಗಳಲ್ಲಿರುವ ಕೊಳವೆ ಬಾವಿಗಳು ಕೂಡ ನೀರು ಪೂರೈಸುವ ಮೂಲಕ ಕೃಷಿಕರ ಬದುಕಿಗೆ ಆಸರೆಯಾಗಿವೆ. ಇದು ಅನೇಕರಿಗೆ ನೀರಿಂಗಿಸಲು ಪ್ರೇರಣೆ, ಸ್ಫೂರ್ತಿ ನೀಡಿದೆ.

ರೈತನಿಗೆ ಹತ್ತು ಕುತ್ತು ಎನ್ನುವಂತೆ ಸಮಸ್ಯೆಗಳಿಗೆ ಧೃತಿಗೆಡದೆ ಸಮಾಧಾನದಿಂದ ಚಿಂತಿಸಿ ಅಗತ್ಯ ಕ್ರಮವಹಿಸಿದರೆ ಪರಿಹಾರ ಕಂಡುಕೊಳ್ಳಬಹುದು. ಚೆಕ್‌ಡ್ಯಾಂ ಮತ್ತು ಮಳೆ ನೀರು ಕೊಯ್ಲು ಮೂಲಕ ಅಂತರ್ಜಲಮಟ್ಟ ಹೆಚ್ಚಿಸಿ ಕೊಳವೆ ಬಾವಿಗಳಿಂದ ಸಮರ್ಪಕ ನೀರು ಮರಳಿ ಪಡೆದುಕೊಳ್ಳಬಹುದು ಎಂಬುದಕ್ಕೆ ಲಿಂಗರಡ್ಡಿ ಮತ್ತು ವಿಜಯಲಕ್ಷ್ಮೀ ದಂಪತಿಗಳೇ ಸಾಕ್ಷಿ. ಇದು ಜಲ ಸಂರಕ್ಷಣೆ, ಅಂತರ್ಜಲ ವೃದ್ಧಿಯ ಪ್ರಧಾನ ಪಾಠವೂ ಹೌದು.

### ಮಿಶ್ರ ಬೇಸಾಯ

ಬಾದಾಮಿ ತಾಲೂಕಿನ ಹೊಸೂರ ಗ್ರಾಮದಲ್ಲಿರುವ 13 ಎಕರೆ ಭೂಮಿಯಲ್ಲಿ 3 ಎಕರೆ ಕಬ್ಬು, ಹತ್ತು ಎಕರೆಯಲ್ಲಿ ಲಿಂಬೆ, ಚಿಕ್ಕು, ಮಾವು ಮಿಶ್ರ ಬೆಳೆಯಾಗಿ ಬೆಳೆಯುತ್ತಿರುವರು. ಕೇವಲ ಒಂದು ಬೆಳೆ ಬೆಳೆದರೆ ಉತ್ತಮ ದರ ದೊರೆಯದಿದ್ದರೆ ಅಥವಾ ಪ್ರಕೃತಿ ಮುನಿಸಿನಿಂದ ಹಾನಿ ಸಂಭವಿಸುವ ಸಾಧ್ಯತೆ ಇದೆ. ಆದರೆ ಮಿಶ್ರ ಬೆಳೆ ಬೇಸಾಯದಿಂದ ರೈತನಿಗೆ ಹಾನಿಯಾಗದು.

ಏಕೆಂದರೆ ಒಂದು ಬೆಳೆ ಕೈಕೊಟ್ಟರೂ ಮತ್ತೊಂದು ಬೆಳೆ ಚೆನ್ನಾಗಿ ಬರುವುದರ ಜೊತೆಗೆ ಉತ್ತಮ ದರ ದೊರಕಿ ಕೈ ಹಿಡಿಯುತ್ತದೆ. ರೈತರು ಕೇವಲ ಒಂದು ಬೆಳೆಗೆ ಜೋತು ಬೀಳದೆ ಮಿಶ್ರ ಬೆಳೆ ಪದ್ಧತಿ ಅನುಸರಿಸಿದರೆ ಒಂದಿಲ್ಲೊಂದು ಬೆಳೆ ಕೈ ಹಿಡಿಯುವ ಮೂಲಕ ಕೃಷಿ ಖಂಡಿತವಾಗಿಯೂ ಲಾಭದಾಯವಾಗಲಿದೆ ಎಂಬುದನ್ನು ವಿಜಯಲಕ್ಷ್ಮೀ ಕುರ್ತಕೋಟಿ ಸಾಕ್ಷೀಕರಿಸಿರುವರು.



### ಗೋ ಶಾಲೆ

ಕೇವಲ ಲಾಭವನ್ನು ನೋಡದೆ ಸಮಾಜಕ್ಕೆ ಏನಾದರೂ ಅಳಿಲು ಸೇವೆ ಮುಟ್ಟಲಿ ಎಂಬ ಉದ್ದೇಶವನ್ನಿಟ್ಟುಕೊಂಡು ನಡೆದಾಡುವ ದೇವರೆಂದೇ ಪ್ರಖ್ಯಾತಿ ಹೊಂದಿದ ವಿಜಯಪುರದ ನಿರಾಭಾರಿ ಸಂತ ಪೂಜ್ಯ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳ ಹೆಸರಿನಲ್ಲಿ ಗೋಶಾಲೆ ಪ್ರಾರಂಭಿಸಿ, 70ಕ್ಕೂ ಅಧಿಕ ಆಕಳುಗಳ ಪಾಲನೆ, ಪೋಷಣೆ ಮಾಡುತ್ತಿರುವುದು ವಿಶೇಷ.

### ಪ್ರಶಸ್ತಿ:

ಬೀಳಗಿ ಪಟ್ಟಣ ಸಹಕಾರ ಬ್ಯಾಂಕ್ ಪ್ರಧಾನ ವ್ಯವಸ್ಥಾಪಕರಾಗಿರುವ ಎಲ್. ಬಿ. ಕುರ್ತಕೋಟಿ ಅವರು ಸತಿ ವಿಜಯಲಕ್ಷ್ಮೀ ಅವರಿಗೆ ಸಾಥ ನೀಡುವುದರ ಜೊತೆಗೆ ಅವರೆಲ್ಲ ಸಾಧನೆಗೆ ಪ್ರೇರಕ ಶಕ್ತಿಯಾಗಿ ನಿಂತಿರುವರು. ವಿಜಯಲಕ್ಷ್ಮೀ ಕುರ್ತಕೋಟಿ ಅವರ ಸಾಧನೆ ಗುರ್ತಿಸಿ ಧಾರವಾಡ ಕೃಷಿ ವಿಶ್ವವಿದ್ಯಾಲಯದಿಂದ 'ಶ್ರೇಷ್ಠ ಕೃಷಿ ಮಹಿಳೆ' ಹಾಗೂ ಭಾರತೀಯ ಕೃಷಿ ಅಣು ಸಂಧಾನ ಪರಿಷತ್ (ಐಸಿಎಆರ್) ನಿಂದ 'ಫೆಲೊ ಫಾರ್ಮರ್' ಪ್ರಶಸ್ತಿಗೆ ಭಾಜನರಾಗಿದ್ದು, ಅಲ್ಲದೆ ಜಿಲ್ಲೆಯ ವಿವಿಧ ಸಂಘ-ಸಂಸ್ಥೆಗಳು ಸನ್ಮಾನಿಸಿ, ಗೌರವಿಸಿವೆ.